3. ಕಿಪ್ತ ಕಾಲದ ವಳಗೆ ಹಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರರು ತೇವಣಾತಿ ಇಟ್ಟು ಮೊಬಲಗು ಸರಕಾರಕ್ಕೆ ಶೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನ ದರಖಾಸ್ತುದಾರನ ಲುಕ್ಸಾನಿಗೆ ವಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಆದರೆ ಮುನರೇ ಹರಾಜಿನಲ್ಲಿ ವುಂಟಾಗುವ ಛಾಯಿದೆ ಭಾಗ ದರಖಾಸ್ತುದಾರನು ಹೊಂದಲು ಅರ್ಹರಾಗುವದಿಲ್ಲ.

4. ಇಜಾರೆದಾರನು ಹಿಡುವಳಿ ಜಮೀನುಗಳಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವಫಸಲನ್ನ ರೂಢಿಸಕೂಡದು.

5. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಪಸಾರೆ ಜಿನಸಿಗಳಲ್ಲಿ ಅಡಗಿರುವದಿಲ್ಲ.

ಎಂ. ನಾರಾಯಣರಾವ್,
ಡಿಪ್ಯುಟಿ ಕಮ್ಮಿಷನರ್.

ಮೈಸೂರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಇಲಾಖೆ.

ನೋಟಿಸ್.

ತಾರೀಖು 10ನೇ ಆಗಸ್ಟ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಮೈಸೂರು ಡಿಸ್ಟ್ರಿಕ್ಟ್ ಫ್ರೆಂಚ್‌ರಾಕ್ಸ್ ಸಬ್ ಡಿವೀರ್ಜ್.

1. ಕೃಷ್ಣರಾಜಪೇಟೆ ತಾಲ್ಲೂಕಿಗೆ ಶೇರಿದ.

(1)	ಕನ್ನಂಬಾಡಿ ಹೋಬಳಿ ಪೈಕಿ.	ಬಲ್ಲೇನಹಳ್ಳಿ ಕಾವಲ್, ಬಿಂಡಹಳ್ಳಿ ಕಾವಲ್.
(2)	ಅಕ್ಕಹೆಬ್ಬಾಳು ಹೋಬಳಿ ಪೈಕಿ.	ಆಲಂಬಾಡಿ ಕಾವಲ್, ಬೆಳ್ಳೇಬೆಟ್ಟದ ಕಾವಲ್.

2. ನಾಗಮಂಗ್ಲ ತಾಲ್ಲೂಕಿಗೆ ಶೇರಿದ.

(1)	ಕನಬೂ ಹೋಬಳಿ ಪೈಕಿ.	ಬನವನಳ್ಳೂ ಮತ್ತು ಕೊತ್ತೀಪುರದ ಕಾವಲ್.
(2)	ಹಂಪಾಪುರದ ಫರಕಾ.	ನಾಗನಕೆರೆ ಕಲ್ಲಗೇರೆ ಕಾವಲ್.

3. ಶ್ರೀರಂಗಪಟ್ಟಣದ ತಾಲ್ಲೂಕಿಗೆ ಶೇರಿದ.

(1)	ಬಳಗುಳ್ಳದ ಹೋಬಳಿ ಪೈಕಿ.	ಕುರಗಳ್ಳಿ, ಬಸ್ತೀಪುರ ಪ್ಯಾಟೇರ್ಷ ಸಮೀಪಗಳಲ್ಲಿ.

(4) ಕೃಷ್ಣರಾಜಪೇಟೆ ತಾಲ್ಲೂಕಿಗೆ ಶೇರಿದ ಡಿಸ್ಟ್ರಿಕ್ಟು ಜಂಗಲ್‌ಗಳೂ ಮತ್ತು ಬೀಬಿಬೆಟ್ಟದ ಜಂಗಲ್ ಸಹ.

ಸ್ಯ 1897ನೇ ಇಸವಿ ಜಾರ್ ಆಖೈರ್ ವರಿಗೆ ಈ ಮೇಲ್ಕಂಡವುಗಳಲ್ಲಿ ವುತ್ಪತ್ತಿ ಆಗುವ ಶೀಗೇಕಾಯಿ, ಅಳಲೇಕಾಯಿ, ದಿಂಡ್ಲು ಗೋಂದು, ಹೊಂಗೇಬೀಜ, ಜೇನುವ್ಯಾಣ, ಜೇನುತುಪ್ಪ, ಹುಣಚೇಹಣ್ಣು ಈ ಬಾಬ್ತುಗಳ 1896ನೇ ಇಸವಿ ಸೆಪ್ಟಂಬರ್ ತಾರೀಖು (2)ರಲ್ಲು ಜಿನಕುರ್ಲಿ ಮುಸಾಫರ್ ಬಂಗ್ಲೆಯಲ್ಲಿ ಡಿಸ್ಟ್ರಿಕ್ಟು ಅಥವಾ ಸಬ್ ಡಿವೀರ್ಜ್ ಫಾರೆಸ್ಟ್ ಆಫಿಸರವರು ಹರಾಜು ಮಾಡಿಸುತ್ತಾರೆ.

2. ದರಖಾಸ್ತಿನಲ್ಲಿ ಮುಂಜಾರಾದ ಜಿನಸಿ ಮೊತ್ತವನ್ನು 1897ನೇ ಇಸವಿ ಏಪ್ರಿಲ್ ಆಖೈರ್ ವಳಗಾಗಿ ಬಗರ್ ಲಾಗವಡಿನಿಂದ ಶ್ರೀರಂಗಪಟ್ಟಣದ ಸಂದಲ್ ಕೋಠಿಗೆ ಪಾವತಿ ಮಾಡಿ ದರೋಗರಿಂದ ರಸೀತಿ ಪಡಿಯಬೇಕು.

3. ದರಖಾಸ್ತು ಮುಂಜಾರಾದವಷ್ಟೆ ಚಕಡದರಖಾಸ್ತುದಾರನು ದರಖಾಸ್ತಿನ ಮೇರೆ ನಡದುಕೊಳ್ಳತಕ್ಕ ಬಗ್ಗೆ (50) ರೂಪಾಯಿಗಳು ಡಿಪಾಜಿಟ್ ಯಿಟ್ಟು ಛಾಪಾಕಾಗದ್ದಲ್ಲಿ ಮುಚ್ಚಳಿಕೆ ಬರದುಕೊಡಬೇಕಲ್ಲದೆ ಮತ್ತು ಖಾತರ್ ಜಾಮೀನ್ ಸಹ ಕೊಡಬೇಕು.

4. ಮೇಲ್ಕಂಡ ಡಿಪಾಜಿಟ್ ಮೊಬಲಗು ಕೂಡಲೆ ಪಾವತಿ ಮಾಡದೆ ಇದ್ದರೆ ಪುನಹ ಹರಾಜು ಕ್ರಮ ನಡಸಿ ಅದರಲ್ಲಿ ವುಂಟಾಗುವ ನಷ್ಟಕ್ಕೆ ಮೊದಲ್ ದರಖಾಸ್ತುದಾರನ್ನ ಗುರಪಡಿಸುತ್ತೆ. (2)ನೇ ದರಖಾಸ್ತಿನಲ್ಲಿ ಮೊದಲ್ ದರಖಾಸ್ತಿಗಿಂತಾ ಸರ್ಕಾರಕ್ಕೆ ಜಾಸ್ತಿ ವುತ್ಪತ್ತಿ ವುಂಟಾದಲ್ಲಿ ಡಿಟೋ ಜಾಸ್ತಿಗೆ ಮೊದಲು ದರಖಾಸ್ತುದಾರನಿಗೆ ಯೇನೂ ಹಕ್ಕು ಇರುವದಿಲ್ಲ.

5. ಮೇಲ್ಕಂಡ ಪಾಯಿದೆಯಲ್ಲಿ ಜಿನಸಿಗಳನ್ನ ಕೋಠಿಗೆ ದರಖಾಸ್ತುದಾರನು ಪಾವತಿಮಾಡಿ ರಸೀತಿ ಹಾಜರ್ ಮಾಡದೆ ಯಿದ್ದಲ್ಲಿ ದರಖಾಸ್ತುದಾರನ ಡಿಪಾಜಿಟ್ ಮೊಬಲಗನ್ನ ಸರ್ಕಾರಕ್ಕೆ ಮುಫತ್ತಾಗಿ ಶಿವಾಜಮೆಗೆ ದಾಖಲ್ಮಾಡಿಕೊಳ್ಳುವದಲ್ಲದೆ ಫಸಲನ್ನ ಅಮಾನಿಯಾ ಇತರ ವಿಧವಾಗಿ ರೂಢಿಸಿ ಅದರಲ್ಲಿ ವುಂಟಾಗುವ ನಷ್ಟಕ್ಕೆ ಮೊದಲು ದರಖಾಸ್ತುದಾರನನ್ನೂ ಮತ್ತು ಜಾಮೀರ್‌ದಾರನನ್ನೂ ಸಹ ಗುರಿಮಾಡಲ್ಪಾಗುತ್ತೆ.

6. ದರಖಾಸ್ತು ಮಂಜೂರ್ ಯಾ ನಾ ಮಂಜೂರ್ ಮಾಡತಕ್ಕ ಹಕ್ಕು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರು ಯಿಟ್ಟುಕೊಂಡಿರುತ್ತಾರೆ.